ಬೀದಿಗಳಲ್ಲಿ ಗಸ್ತು ತಿರುಗಿ, ಅವರಿವರ ಮನೆಯ ಕಂಪೋಂಡಿನಿಂದ ಹೊರಬಾಗಿ ತೂಗುವ ಕೊಂಬೆರೆಂಬೆಗಳಿಂದ ಹೂವುಗಳನ್ನು ಕದ್ದು ತರುವನು! ಬಗೆಬಗೆಯ ದಾಸವಾಳ, ಗುಲಾಬಿ, ಕೆಂಡಸಂಪಿಗೆ... ಹೀಗೆ. ಬಗೆಬಗೆಯ ಬಣ್ಣ. ಅವನು ತಂದಿರಿಸುವ ಪುಷ್ಪರಾಶಿಯನ್ನು ನಿಜಕ್ಕೂ ದುಡ್ಡು ಕೊಟ್ಟು ಕೊಂಡರೆ ತಿಂಗಳಿಗೆ ಹತ್ತಾರು ಸಾವಿರ ಖರ್ಚಲ್ಲವೇ ಎಂದು ಯೋಚನೆಯಾಗುವುದು. 'ಕದ್ದು ತಂದ ಚೋರಮಾಲನ್ನು ದೇವರಿಗೇರಿಸಿ ಏನು ಪುಣ್ಯ ಸಂಪಾದಿಸುವಿರೋ?!' ಎಂದು ನಾನು ಬೈದಾಡುವೆನು. ಕೂಡಲೇ ತಪಸ್ಸು, 'ಐಸಾ ಮತ್ ಬೋಲೋ, ಸಾಬ್ ಜೀ... ಕದಿಯೋದು ನಮಗೋಸ್ಕರ ಅಲ್ಲವಲ್ಲಾ ಭಗವಾನನಿಗಾಗಿ ತಾನೆ? ಅವನೇ ಮಾಡಿದ ಹೂವು, ಅವನನ್ನು ಸೇರಿದರೆ ತಪ್ಪೇನು?' ಅಂತೆಲ್ಲ ಸಿದ್ಧಾಂತವಾಡಿ ಬಾಯಿ ಕಟ್ಟಿಸುವನು!

ಹೀಗೆ ದಿನದಿಂದ ದಿನಕ್ಕೆ ತನ್ನ ಸಾತ್ವಿಕತೆಯಿಂದಷ್ಟೇ ನನ್ನ ಅಮ್ಮನಿಗೂ, ಹೆಂಡತಿಗೂ ಅತ್ಯಾಪ್ತನಾಗಿಬಿಟ್ಟ ತಪಸ್ಸು, ನನ್ನನ್ನು ಮಾತ್ರ ಒಂದಲ್ಲ ಒಂದು ರೀತಿಯಲ್ಲಿ ಎದುರುಹಾಕಿಕೊಂಡೇ ಉಳಿದ! ಅವನು ಇವರಿಬ್ಬರಿಗೂ ಹತ್ತಿರವಾಗಲಿಕ್ಕೆ ಈ ಕೆಲವು ಕಾರಣಗಳಿರಬಹುದು: ಒಂದು, ಎಂಬತ್ತು ವಯಸ್ಸಿನ ನನ್ನ ಅಮ್ಮನಿಗೆ ತಕ್ಕುದಾದ ನಂಬಿಕೆಗಳನ್ನು ಅವನಿನ್ನೂ ಇಟ್ಟುಕೊಂಡಿರುವುದು; ಎರಡು, ಎಷ್ಟೇ ಆಧುನಿಕಳಾದರೂ ಶಾಸ್ತ್ರಾದಿ ಸಂಪ್ರದಾಯಗಳನ್ನು ಒಳಬದುಕಿನಲ್ಲಿ ಹೂಡಿಕೊಂಡಿರುವ ನನ್ನ ಹೆಂಡತಿ, ಒಂದರ್ಥದಲ್ಲಿ, ನಂಬಿಕೆಗಳಿಗೆ ಸಂಬಂಧಿಸಿದಂತೆ ನನ್ನ ಕಡೆಗಿಂತ ಹೆಚ್ಚು ನನ್ನಮ್ಮನತ್ತಲೇ ವಾಲುವುದು. ಮೊದಲನೇ ಕಾರಣವು ಎರಡನೆಯದಕ್ಕೆ

